# ಆತಂಕದ ಮೋಡವ ಗೆಲುವಿನ ಮಳೆಯಾಗಿಸಿ

**ಅಮೆರಿಕ ಓಪನ್ ಟೆನಿಸ್ ಸಿಂಗಲ್ಸ್‌ನಲ್ಲಿ ಈ ಸಲ ಜೊಕೊವಿಚ್ ಸೋತಿದ್ದು ಬರೀ ಎರಡು ಸೆಟ್‌ಗಳಲ್ಲಿ. ಆ ಸೋಲಿನಿಂದ ಅವರು ಹೊರಬಂದು, ಆಟದ ವೈಖರಿಯಲ್ಲೇ ಬದಲಾವಣೆ ತಂದುಕೊಂಡು ಗ್ರ್ಯಾನ್ ಸ್ಲಾಮ್ ಗೆದ್ದ ಸೂಕ್ಷ್ಮಗಳು ಪದೇಪದೇ ಮೆಲುಕು ಹಾಕುವಷ್ಟು ಚಂದದವು.**

■ ಎನ್ವಿ

ಇದೇ ಸೆಪ್ಟೆಂಬರ್ 2ರ ಶನಿವಾರ ಅಮೆರಿಕ ಓಪನ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್‌ನ ಮೂರನೇ ಸುತ್ತಿನ ಪಂದ್ಯ ನಡೆಯಿತು. ನೊವಾಕ್ ಜೊಕೊವಿಚ್ ಆತ್ಮಬಲದ ಮುಂದೆ ಎದುರಾಳಿ ಏನು ಮಾಡಿಯಾರು ಎಂದೇ ಬಹುತೇಕರು ಭಾವಿಸಿದ್ದರು. ಎದುರಲ್ಲಿ ಇದ್ದುದು ಅವರದ್ದೇ ಸರ್ಬಿಯಾ ದೇಶದ ಲಾಸ್ಲೊ ಜೆಯರ್, 32ನೇ ಶ್ರೇಯಾಂಕಿತ ಆಟಗಾರ. ಒಮ್ಮೆಯೂ ಮೂರನೇ ಸುತ್ತನ್ನು ಅವರು ಗೆದ್ದಿರಲಿಲ್ಲ. ಪಂದ್ಯ ಶುರುವಾದ ಕೆಲವೇ ನಿಮಿಷಗಳಲ್ಲಿ ಆಗಿದ್ದೇ ಬೇರೆ. 4–6, 4–6ರಲ್ಲಿ ಮೊದಲ ಎರಡೂ ಸೆಟ್‌ಗಳನ್ನು ಜೊಕೊವಿಚ್ ಸೋತರು. ಬ್ರೇಕ್‌ನಲ್ಲಿ ಸೀದಾ ಲಾಕ್ ರೂಮ್‌ಗೆ ಹೋದರು. ಅಲ್ಲಿದ್ದ ಕನ್ನಡಿಯ ಎದುರು ನಿಂತು ನಿಟ್ಟುಸಿರಿಟ್ಟರು. ತಮಗೆ ತಾವೇ ಬುದ್ಧಿ ಹೇಳಿಕೊಂಡರು. ಹೀಗಾ ಆಡುವುದು ಎಂದು ನಕ್ಕರು. ಪ್ರತಿಬಿಂಬದಲ್ಲಿ ಕಂಡ ತಮ್ಮದೇ ನಗುಮುಖ ಅವರಲ್ಲಿ ಆತ್ಮವಿಶ್ವಾಸ ತುಂಬಿತು. ಅಂಗಳಕ್ಕೆ ಮರಳಿದ ಮೇಲೆ ಅವರ ಆಟದ ಲಯವೇ ಸಂಪೂರ್ಣ ಬದಲಾಯಿತು. 6–1, 6–3, 6–3ರಲ್ಲಿ ಅವರು ಮುಂದಿನ ಮೂರೂ ಸೆಟ್‌ಗಳನ್ನು ಗೆದ್ದುಕೊಂಡರು. ವೃತ್ತಿಬದುಕಿನ 24ನೇ ಗ್ರ್ಯಾನ್ ಸ್ಲಾಮ್ ಪ್ರಶಸ್ತಿ ಎತ್ತಿಹಿಡಿದ ಮೇಲೆ ಮತ್ತೆ ಅವರು ಕನ್ನಡಿಯ ಮುಂದೆ ನಿಂತೇ ಇರುತ್ತಾರೆ. ಅವರದ್ದೇ ಗೆಲುವಿನ ಬಿಂಬ ಅದರಲ್ಲಿ ಕಂಡಿರುವುದರಲ್ಲಿ ಅನುಮಾನವೇ ಇಲ್ಲ.

2008ರಲ್ಲಿ ತಮ್ಮ 20ನೇ ವಯಸ್ಸಿನಲ್ಲಿ ಜೊಕೊವಿಚ್ ಆಸ್ಟ್ರೇಲಿಯಾ ಓಪನ್ ಪುರುಷರ ಸಿಂಗಲ್ಸ್‌ನಲ್ಲಿ ರೋಜರ್ ಫೆಡರರ್, ರಫೆಲ್ ನಡಾಲ್ ಇಬ್ಬರನ್ನೂ ಸೋಲಿಸಿದ್ದರು. ಆಗ ಪ್ರಶಸ್ತಿ ಎತ್ತಿ ಹಿಡಿದಾಗಲೇ ಅವರ ಭವಿಷ್ಯ ಬೆಳ್ಳಿಗೆರೆಗಳಿಂದ ತುಂಬಲಿದೆ ಎನ್ನುವುದು ಸ್ಪಷ್ಟವಿತ್ತು. ಸಂಯಮ, ದಾಳಿಕೋರತನ ಎರಡನ್ನೂ ಬೆರೆಸಿದಂತೆ ಅವರು ಆಗ ಆಡುತ್ತಿದ್ದರು. ತಾರುಣ್ಯಸಹಜ ಬಲ ಕಾಲುಗಳ ಸ್ನಾಯುಗಳಲ್ಲಿತ್ತು. ಈಗ ಪರಿಸ್ಥಿತಿ ಹಾಗಿಲ್ಲ. ಮೂವತ್ತಾರನೇ ವಯಸ್ಸಿನಲ್ಲಿ ಅವರು 28 ವರ್ಷದ ಜೆಯರ್ ವಿರುದ್ಧ ಆಡುವಾಗಿನ ಸಂದರ್ಭವೇ ಬೇರೆ.

ನರನಾಡಿಗಳಲ್ಲೆಲ್ಲ ಮಡುಗಟ್ಟಿದ ಆತಂಕ ಇಟ್ಟುಕೊಂಡು ಗೆಲುವಿಗಾಗಿ ಪದೇ ಪದೇ ಗಂಟಲಲ್ಲಿ ಉಗುಳು ನುಂಗುತ್ತಾ ನಿಲ್ಲುವುದು ತಮಾಷೆಯಲ್ಲ. ಜೊಕೊವಿಚ್ ಮಾನಸಿಕವಾಗಿ ಎಷ್ಟು ಗಟ್ಟಿಗ ಎನ್ನುವುದಕ್ಕೆ ಮೂರನೇ ಸುತ್ತಿನ ಪಂದ್ಯದ ಕೊನೆಯ ಸೆಟ್‌ನ ಮೊದಲ 14 ಪಾಯಿಂಟ್‌ಗಳಲ್ಲಿ 12ನ್ನು ಗೆದ್ದುಕೊಂಡಿದ್ದೇ ಸಾಕ್ಷಿ.



ಈ ಸಲ ಅಮೆರಿಕ ಓಪನ್ ಸಿಂಗಲ್ಸ್‌ನಲ್ಲಿ ಜೊಕೊವಿಚ್ ಸೋತ ಎರಡೇ ಎರಡು ಸೆಟ್‌ಗಳು ಮೂರನೇ ಸುತ್ತಿನಲ್ಲಿ ಬಂದಂಥವು ಎನ್ನುವುದಕ್ಕೆ ಗೆರೆ ಎಳೆಯಬೇಕು. ಅವರ ಎಟಿಪಿ ಟೆನಿಸ್ ವೃತ್ತಿಬದುಕಿನಲ್ಲಿ ಇದುವರೆಗೆ– ಮೊನ್ನೆಯದ್ದೂ ಸೇರಿ– ಎಂಟು ಸಲವಷ್ಟೆ ಇಂತಹ ಪರಿಸ್ಥಿತಿ ಬಂದಿದ್ದು. ಅಂದರೆ, ಮೊದಲ ಎರಡು ಸೆಟ್‌ಗಳಲ್ಲಿ ಸೋಲುಂಡು ಮುಂದಿನ ಮೂರನ್ನೂ ಗೆದ್ದು ಬೀಗಿದ ಸಂದರ್ಭಗಳು. ಈ ರೀತಿ ಗೆಲ್ಲಲು ಸೆಪ್ಟೆಂಬರ್ 2ರಂದು ಜೊಕೊವಿಚ್ ಅವರಿಗೆ ಬೇಕಾದದ್ದು ಭರ್ತಿ ನಾಲ್ಕು ಗಂಟೆ ನಾಲ್ಕು ನಿಮಿಷ. ಆ ದಿನ ಒಂದು ವೇಳೆ ಜೆಯರ್ ಗೆದ್ದಿದ್ದರೆ ಅವರ ಆತ್ಮಬಲ ಇನ್ನಷ್ಟು ಹೆಚ್ಚಾಗುತ್ತಿದ್ದುದರಲ್ಲಿ ಅನುಮಾನವೇ ಇಲ್ಲ.

ಫೈನಲ್‌ನಲ್ಲಿ ಜೊಕೊವಿಚ್ ಮಣಿಸಿದ್ದು ರಷ್ಯಾದ ಡೇನಿಯೆಲ್ ಮೆಡ್ವೆಡೇವ್ ಅವರನ್ನು; 6–3, 7–6 (7–5), 6–3ರ ನೇರ ಸೆಟ್‌ಗಳಿಂದ. ಸೆಮಿಫೈನಲ್‌ನಲ್ಲಿ ಸ್ಪೇನ್‌ನ ಕಾರ್ಲೊಸ್ ಅಲ್ಕರಾಜ್ ಅವರನ್ನು ಮೆಡ್ವೆಡೇವ್ ಸೋಲಿಸಿದ್ದು ಕೂಡ ಅಮೆರಿಕ ಓಪನ್‌ನ ಹೈಲೈಟ್. ಯಾಕೆಂದರೆ, ಅದೇ ಆಟಗಾರ ಈ ವರ್ಷ ವಿಂಬಲ್ಡನ್ ಚಾಂಪಿಯನ್ ಆಗಿದ್ದು ಜೊಕೊವಿಚ್ ಅವರನ್ನು ಫೈನಲ್‌ನಲ್ಲಿ ಸೋಲಿಸಿ. ಒಂದು ವೇಳೆ ಅವರೇ ಫೈನಲ್ ಪ್ರವೇಶಿಸಿದ್ದರೆ, ಪಂದ್ಯ ಇನ್ನೂ ರೋಚಕವಾಗುತ್ತಿದ್ದುದರಲ್ಲಿ ಅನುಮಾನವೇ ಇಲ್ಲ.

ಈ ಸಲ ಮೂರು ಗ್ರ್ಯಾನ್ ಸ್ಲಾಮ್ ಪ್ರಶಸ್ತಿಗಳನ್ನು ಜೊಕೊವಿಚ್ ಗೆದ್ದಂತಾಗಿದೆ. ಇಂತಹ ಸಾಧನೆಯನ್ನು ಅವರು ನಾಲ್ಕು ವರ್ಷ ಮಾಡಿದ್ದಾರೆ. 12 ವರ್ಷಗಳ ಅವಧಿಯಲ್ಲಿ ಅವರು 300ಕ್ಕೂ ಹೆಚ್ಚು ದಿನಗಳ ಕಾಲ ನಂಬರ್ ಒನ್ ಆಟಗಾರನಾಗಿ ಮೆರೆದಿದ್ದಾರೆ. ಫೆಡರರ್ ಹೆಸರಲ್ಲಿದ್ದ 20 ಗ್ರ್ಯಾನ್ ಸ್ಲಾಮ್, ನಡಾಲ್ ಹೆಸರಲ್ಲಿದ್ದ 22 ಗ್ರ್ಯಾನ್ ಸ್ಲಾಮ್ ಪ್ರಶಸ್ತಿಗಳ ದಾಖಲೆಗಳನ್ನು ಅವರು ಅಳಿಸಿಹಾಕಿದ್ದಾಗಿತ್ತು. ಈಗ ಆಸ್ಟ್ರೇಲಿಯಾದ ಆಟಗಾರ್ತಿ ಮಾರ್ಗರೇಟ್ ಕೋರ್ಟ್ ಗಳಿಸಿದ್ದ 24 ಸಿಂಗಲ್ಸ್ ಪ್ರಶಸ್ತಿಗಳಿಗೆ ಸರಿಸಮಾನರಾಗಿದ್ದಾರೆ. ಟೆನಿಸ್ ಓಪನ್ ಯುಗದಲ್ಲಿಯಂತೂ ಅತಿ ಹೆಚ್ಚು ಗ್ರ್ಯಾನ್ ಸ್ಲಾಮ್ ಪ್ರಶಸ್ತಿ ಗೆದ್ದ ದಾಖಲೆಯ ವೀರ ಅವರು.

‘ಬಾಲ್ಯದಲ್ಲಿ ಕಂಡ ಕನಸು ದೊಡ್ಡ ಮಟ್ಟದಲ್ಲಿ ನನಸಾಗಿದೆ. ನನ್ನಲ್ಲೀಗ ಮಾತುಗಳಿಲ್ಲ’ ಎಂದು ಜೊಕೊವಿಚ್ ಹೇಳಿದ್ದು ಬಹಳ ಅರ್ಥಪೂರ್ಣ. ಅವರಲ್ಲಿ ಈಗಲೂ ಇರುವುದು ಮಾತಲ್ಲ, ಆಟ.

ಪ್ರತಿಕ್ರಿಯಿಸಿ:
feedback@sudha.co.in